ಸಿನಿಮಾರಂಗಕ್ಕೆ ಕಾಲಿಟ್ಟಾಗ ನಮಗಾಗಿ ವ್ಯಾನಿಟಿ ವ್ಯಾನ್‌ಗಳೂ ಇರಲಿಲ್ಲ' ಎಂದು ಹೋಲಿಕೆ ಮಾಡಿದ್ದಾಳೆ ಶಿಲ್ಪಾ.

'ನಾವು ನಮ್ಮ ವೃತ್ತಿಬದುಕನ್ನು ಪ್ರಾರಂಭಿಸಿದ್ದಾಗಿನ ಕಾಲಕ್ಕಿಂತಲೂ ಈಗಿನ ನಟ–ನಟಿಯರು ಹೆಚ್ಚು ತಿಳಿವಳಿಕೆ, ಸಿದ್ಧತೆ ಹೊಂದಿರುತ್ತಾರೆ. ಸಿನಿಮಾರಂಗದ ಸಂಪೂರ್ಣ ಸ್ವರೂಪವೇ ಬದಲಾಗಿದೆ. ಈಗಲೂ ಹುಚ್ಚುತನವಿದೆ. ಆದರೆ, ಅದು ಸಂಯೋಜಿತ ಹುಚ್ಚುತನ' ಎನ್ನುವುದು ಆಕೆಯ ಅಭಿಪ್ರಾಯ.

ತಾಯ್ತನದ ಹೊಣೆಗಾರಿಕೆ ಬಂದ ಬಳಿಕ ತನ್ನ ಪಾತ್ರಗಳ ಆಯ್ಕೆಯಲ್ಲಿ ಬದಲಾವಣೆಯಾಗಿದೆ ಎಂದು ಶಿಲ್ಪಾ ಹೇಳುತ್ತಾಳೆ. ಹಾಗೆಯೇ ತಾಯ್ತನವು ನಟಿಯರ ಸಿನಿಮಾ ಬದುಕಿಗೆ ಅಡ್ಡಿಯಾಗುತ್ತದೆ ಎಂಬ ಅಭಿಪ್ರಾಯವನ್ನು ಆಕೆ ಒಪ್ಪುವುದಿಲ್ಲ. ಆ ಗ್ರಹಿಕೆ ಸರಿಯಲ್ಲ. ಮಾಲಾ ಸಿನ್ಹಾ, ಶರ್ಮಿಳಾ ಟ್ಯಾಗೋರ್, ಶ್ರೀದೇವಿಯಂತಹ ನಟಿಯರು ಸಿನಿಮಾ ಮಾಡುತ್ತಿಲ್ಲವೇ? ಕಾಲ ಬದಲಾಗುತ್ತದೆ. ಹಾಗೆಯೇ ಅದು ಮುಂದುವರೆಯುತ್ತದೆ ಎನ್ನುವುದು ಆಕೆಯ ಅಭಿಪ್ರಾಯ.

ಹಾಗೆಂದು 'ನಾನೀಗ ಕಾಲೇಜು ಯುವತಿಯ ಪಾತ್ರ ಮಾಡಲಾಗುವುದಿಲ್ಲ. ಐಶ್ವರ್ಯಾ ರೈ, ಕಾಜೋಲ್, ವಿದ್ಯಾ ಬಾಲನ್ ಮುಂತಾದ ನಟಿಯರು ತಮ್ಮ ವಯೋಮಾನಕ್ಕೆ ತಕ್ಕನಾದ ಪ್ರಬುದ್ಧ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ನಟಿಯರಿಗೆ ಅದು ಬಹಳ ಮುಖ್ಯ ಸಂಗತಿ' ಎಂದಿದ್ದಾಳೆ ಶಿಲ್ಪಾ.



# ಹಾಲಿವುಡ್ ಮೇಲೆ ಇಶಾ ಕಣ್ಣು



'ರಾಜ್ 2' ಚಿತ್ರದ ಮೂಲಕ ಬಾಲಿವುಡ್ ಪರದೆ ಮೇಲೆ ಕಾಣಿಸಿಕೊಳ್ಳುವ ಅವಕಾಶ ಪಡೆದ ಇಶಾ ಗುಪ್ತಾ ಮತ್ತೆ ಮಿಂಚಿದ್ದು ಕಡಿಮೆ. ಬಾಲಿವುಡ್‌ನಲ್ಲಿ ಗಟ್ಟಿಯಾಗಿ ನೆಲೆಯೂರುವಲ್ಲಿ ಆಕೆಯದು ಇನ್ನೂ ಹೋರಾಟದ ವೃತ್ತಿ ಬದುಕು. ಆದರೆ ಆಕೆಯ ಕಣ್ಣು ಈಗಲೇ ಸಪ್ತಸಾಗರದಾಚೆಗೆ ಹರಿಯುತ್ತಿದೆ.

ಹಾಲಿವುಡ್ ತಾರೆ ಏಂಜಲಿನಾ ಜೋಲಿಯ ಮುಖ ಚಹರೆಯನ್ನು ಇಶಾ ಹೋಲುತ್ತಾಳೆ ಎಂಬುದನ್ನು ಅನೇಕರು ಗುರುತಿಸಿದ್ದಾರೆ. ಅದು ಆಕೆಗೆ ಖುಷಿ ನೀಡಿದೆ. ಅದರ ಬೆನ್ನಲ್ಲೇ ಪಶ್ಚಿಮದ ಬಣ್ಣದ ಜಗತ್ತಿನ ಬೆನ್ನು ಹತ್ತುವ ಬಯಕೆಯನ್ನೂ ವ್ಯಕ್ತಪಡಿಸಿದ್ದಾಳೆ.

'ನಾನು ಹಾಲಿವುಡ್ ಚಿತ್ರಗಳಲ್ಲಿ ನಟಿಸಲು ಇಷ್ಟಪಡುತ್ತೇನೆ. ಇಲ್ಲಿವರೆಗೂ ಅದಕ್ಕೆ ಪ್ರಯತ್ನಿಸಿಲ್ಲ. ಯಾವುದೇ ಆಡಿಷನ್ ನೀಡಿಲ್ಲ, ಯಾರನ್ನೂ ಸಂಪರ್ಕಿಸಿಲ್ಲ. ಅದಕ್ಕಾಗಿ ಎದುರು ನೋಡುತ್ತಿದ್ದೇನೆ. ಬಹುಶಃ ಅದೇ ನನ್ನ ಮುಂದಿನ ಯೋಜನೆ' ಎಂದು ತನ್ನ ಗುರಿಯನ್ನು ಹಂಚಿಕೊಂಡಿದ್ದಾಳೆ ಇಶಾ.

ಹಾಲಿವುಡ್‌ನ ಪಯಣಕ್ಕೆ ಆಕೆಗೆ ಸ್ಫೂರ್ತಿಯಾಗಿರುವುದು ಪ್ರಿಯಾಂಕಾ ಚೋಪ್ರಾ ಮತ್ತು ದೀಪಿಕಾ ಪಡುಕೋಣೆ. 'ಅವರಿಬ್ಬರೂ ತಮ್ಮನ್ನು ಮಾತ್ರವಲ್ಲ, ಭೂಪಟದಲ್ಲಿ ಭಾರತವನ್ನು ವಿಭಿನ್ನ ಮಟ್ಟಕ್ಕೆ ಕೊಂಡಿಯ್ದವರು ಅವರು. ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿದ ಕ್ರೀಡಾಪಟುಗಳಿದ್ದಾರೆ. ಈಗ ನಮ್ಮಲ್ಲಿ ಎಲ್ಲರಿಗಿಂತ ಜನಪ್ರಿಯರಾದ ಸಿನಿಮಾ ತಾರೆಯರಿದ್ದಾರೆ' ಎಂದಿದ್ದಾಳೆ ಇಶಾ.

'ದೇಶದ ಪ್ರಧಾನಿ ಯಾರೆಂಬುದು ವಿಶ್ವದ ಜನರಿಗೆ ಗೊತ್ತಿಲ್ಲದೆಯೇ ಇರಬಹುದು, ಆದರೆ ಸಿನಿಮಾ ತಾರೆಯರು ಯಾವ ದೇಶದಿಂದ ಬಂದವರು ಎಂಬುದನ್ನು ಅವರು ತಿಳಿದಿರುತ್ತಾರೆ. ಈಗ ಜಗತ್ತಿನ  ಎಲ್ಲೆಡೆಯ ಮಂದಿ ಪ್ರಿಯಾಂಕಾ ಮತ್ತು ದೀಪಿಕಾ ಭಾರತದವರು ಎಂದು ಗುರುತಿಸುತ್ತಾರೆ' ಎಂದಿದ್ದಾಳೆ ಆಕೆ.

ಆರಂಭದಲ್ಲಿ ಇಶಾಳ ಅದೃಷ್ಟ ಕೈಕೊಟ್ಟಿದ್ದರೂ ಈಗ ದೆಸೆ ಬದಲಾಗುತ್ತಿದೆ. ಅಕ್ಷಯ್ ಕುಮಾರ್ ಜತೆ 'ರುಸ್ತುಂ' ಜತೆ ನಟಿಸಿದ  ಆಕೆ, 'ಕಮಾಂಡೊ 2', 'ಬಾಶಾಹೊ' ಚಿತ್ರಗಳಲ್ಲಿಯೂ ಅಭಿನಯಿಸುತ್ತಿದ್ದಾಳೆ. ಆಕೆಯ ಪ್ರಕಾರ ಬಾಲಿವುಡ್ ಕುಟುಂಬಕ್ಕೆ ಸೇರಿರದ ಕಲಾವಿದರು ಪ್ರತಿಭೆಗಿಂತಲೂ ಹೆಚ್ಚಾಗಿ ಸಹನೆ ಹೊಂದಿರಬೇಕು ಎನ್ನುವುದು ಆಕೆಯ ಅಭಿಪ್ರಾಯ. ತನ್ನ ವಿಚಾರದಲ್ಲಿ ಅದು ಸತ್ಯವಾಗುತ್ತಿದೆ ಎಂದು ಹೇಳಿಕೊಳ್ಳುತ್ತಾಳೆ.

■ ಅಮಿ